International Journal of Kannada Research
www.kannadajournal.com

ISSN: 2454–5813
IJKR 2024; 10(1): 123-126
© 2024 IJKR
www.kannadajournal.com
Received: 19-12-2023
Accepted: 23-01-2024

**ಡಾ. ಬಸವರಾಜ ಮ. ಜನಗೌಡ**
ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ಕೆ.ಎಲ್.ಇ. ಸಂಸ್ಥೆಯ, ಜಿ.ಆಯ್.ಬಾಗೇವಾಡಿ ಕಲಾ, ವಿಜ್ಞಾನ ಹಾಗೂ, ವಾಣಿಜ್ಯ ಮಹಾವಿದ್ಯಾಲಯ, ನಿಪ್ಪಾಣಿ, ಜಿಲ್ಲೆ: ಬೆಳಗಾವಿ ರಾಜ್ಯ: ಕರ್ನಾಟಕ, ಭಾರತ

**Corresponding Author:**
**ಡಾ. ಬಸವರಾಜ ಮ. ಜನಗೌಡ**
ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ಕೆ.ಎಲ್.ಇ. ಸಂಸ್ಥೆಯ, ಜಿ.ಆಯ್.ಬಾಗೇವಾಡಿ ಕಲಾ, ವಿಜ್ಞಾನ ಹಾಗೂ, ವಾಣಿಜ್ಯ ಮಹಾವಿದ್ಯಾಲಯ, ನಿಪ್ಪಾಣಿ, ಜಿಲ್ಲೆ: ಬೆಳಗಾವಿ ರಾಜ್ಯ: ಕರ್ನಾಟಕ, ಭಾರತ

# ವಚನಗಳಲ್ಲಿ ಸ್ತ್ರೀ ಚಿತ್ರಣ: ಒಂದು ವಿವೇಚನೆ

**ಡಾ. ಬಸವರಾಜ ಮ. ಜನಗೌಡ**

**ಪೀಠಿಕೆ**

೧೨ನೇ ಶತಮಾನದಲ್ಲಿ ಶಿವಶರಣರ ಧಾರ್ಮಿಕ ಜೀವನವನ್ನು ರೂಪುಗೊಳಿಸುವುದರಲ್ಲಿ ನೆರವಾಗುವಂತೆ ವಚನಗಳು ಸೃಷ್ಟಿಯಾದವು. ಸಮಾಜದಲ್ಲಿರುವ ದುಸ್ಥಿತಿಯನ್ನು ಹೋಗಲಾಡಿಸಬೇಕೆಂದು ವಚನಕಾರರು ನಿರಂತರ ಶ್ರಮಿಸಿದ್ದಾರೆ. ಉನ್ನತ ಭಾವಗಳ ಅಭಿವ್ಯಕ್ತಿಗೆ ಅನುಭಾವಗಳ ಬೆಳಕನ್ನು ಬೀರುವುದಕ್ಕೆ ಜನಬಳಕೆಯ ಕನ್ನಡ ಸಮರ್ಪಕವಾಗಿರುವುದನ್ನು ಸ್ವತಃ ಪ್ರಯೋಗದಿಂದ ತೋರಿಸಿಕೊಟ್ಟರು. ಇವರ ಧರ್ಮ, ನೀತಿ ಆಧ್ಯಾತ್ಮಿಕ ಅನುಭವಗಳ ಅಂತರ್ವಾಣಿಯಾಗಿ ಹೊರಹೊಮ್ಮಿದ ವಚನಗಳು ಸಾಹಿತ್ಯ ರೂಪವನ್ನು ಪಡೆದು ಕನ್ನಡ ಸಾಹಿತ್ಯಕ್ಕೆ ವಿಶಿಷ್ಟವಾದ ಕೊಡುಗೆಯಾಗಿವೆ.

ಶತಮಾನಗಳಿಂದ ಅಸ್ಪೃಶ್ಯಳಾದ, ಅದೃಶ್ಯಳಾದ ಹೆಣ್ಣನ್ನು ವಚನಕಾರರು ಮಾನವೀಯ ದೃಷ್ಟಿಯಿಂದ ಕಂಡಿದ್ದಾರೆ. ಸರಿಸಮಾನವಾದ ಸ್ಥಾನ–ಮಾನಗಳನ್ನು ನೀಡಿದ್ದಾರೆ. ೧೨ನೇ ಶತಮಾನದಲ್ಲಿ ಕರ್ನಾಟಕದಲ್ಲಿ ನಡೆದ ವಚನಚಳುವಳಿ ಮಹಿಳಾ ವಿಮೋಚನೆಯ ದೃಷ್ಟಿಯಿಂದ ಇಡೀ ಜಗತ್ತಿಗೆ ಮಾದರಿಯಾಗಿದೆಯೆಂಬುದಕ್ಕೆ ಅನೇಕ ಆಧಾರಗಳು ದೊರೆಯುತ್ತವೆ ಎನ್ನುತ್ತಾರೆ ಬಸವರಾಜ ಸಬರದ. ಅವರು ತಮ್ಮ ಶರಣರ ಸಾಮಾಜಿಕ ಸಿದ್ಧಾಂತಗಳು ಅಂಕಣದಲ್ಲಿ ಲಿಂಗಸಮಾನತೆ ವಚನಕಾಲದಲ್ಲಿ ಸಾಧ್ಯವಾದ ಬಗೆಯನ್ನು ಚರ್ಚಿಸಿದ್ದಾರೆ.

ವರ್ಗವ್ಯವಸ್ಥೆಯಲ್ಲಿ ಬಡವರಿಗೆ ಶೋಷಣೆಯಾಗಿದೆ, ಆದರೆ ಲಿಂಗರಾಜಕೀಯದ ವ್ಯವಸ್ಥೆಯಲ್ಲಿ ಎಲ್ಲ ಜಾತಿ–ವರ್ಗಗಳಲ್ಲಿ ಬರುವ ಮಹಿಳೆಯರ ಶೋಷಣೆಯಾಗಿದೆ. ಅಸ್ಪೃಶ್ಯ ಮಹಿಳೆಯ ಶೋಷಣೆ ಒಂದು ರೀತಿಯದಾದರೆ, ಬ್ರಾಹ್ಮಣ ಮಹಿಳೆಯರ ಶೋಷಣೆ ಮತ್ತೊಂದು ರೀತಿಯದು. ಅರಸನಾದವನು ಶೋಷಣೆಯ ಕೇಂದ್ರವಾಗಿದ್ದರೆ, ಅರಸಿಯಾದವಳು ಸ್ವತಃ ಶೋಷಣೆಗೊಳಗಾಗಿದ್ದಳು. ಅಂತೆಯೇ ಶರಣರು "ಅರಸನ ಮನೆಯಲ್ಲಿ ಅರಸಿಯಾಗಿರುವುದಕ್ಕಿಂತ ಭಕ್ತರ ಮನೆಯಲ್ಲಿ ತೊತ್ತಾಗಿರುವುದು ಲೇಸೆಂದು" ಹೇಳಿದ್ದಾರೆ. ಅರಮನೆಯಲ್ಲಿದ್ದ ಅರಸಿಗೂ ಗುಡಿಸಲದಲ್ಲಿದ್ದ ಬಡವಿಗೂ ಶೋಷಣೆಯೆಂಬುದು ತಪ್ಪಿರಲಿಲ್ಲ. ಶೋಷಣೆಯ ಸ್ವರೂಪ ಬೇರೆಯಾಗಿತ್ತೇ ಹೊರತು, ಯಾವ ಮಹಿಳೆಯೂ ಶೋಷಣೆಯಿಂದ ಮುಕ್ತಳಾಗಿರಲಿಲ್ಲ.

ವರ್ಣಹೋರಾಟ, ವರ್ಗಹೋರಾಟದಿಂದ ಸಮಾಜ ವ್ಯವಸ್ಥೆಯ ಕೆಲವು ಜನರಿಗೆ ಸಮಾನತೆ ದೊರೆತರೆ, ಸ್ತ್ರೀ ಹೋರಾಟದಿಂದ ಸಕಲರಿಗೂ ಸಮಾನತೆ ಸಿಕ್ಕಂತಾಗುತ್ತದೆ. ಈ ದೇಶದ ಅರ್ಧದಷ್ಟು ಜನಸಂಖ್ಯೆಯಲ್ಲಿರುವ ಮಹಿಳೆಯರಿಗೆ ಸಮಾನತೆ ಸಿಕ್ಕರೆ, ಅದು ಇಡೀ ದೇಶಕ್ಕೆ ಸಮಾನತೆ ಸಿಕ್ಕಂತಾಗುತ್ತದೆ. ಶರಣರ ಈ ಹೋರಾಟದ ಫಲವಾಗಿ ಅಕ್ಕಮಹಾದೇವಿ, ಮುಕ್ತಾಯಕ್ಕ, ನೀಲಮ್ಮ, ಕಾಳವ್ವೆ, ಸತ್ಯಕ್ಕ, ಆಯ್ದಕ್ಕಿ ಲಕ್ಕಮ್ಮರಂತಹ ಎತ್ತರದ ವ್ಯಕ್ತಿತ್ವದ ಮಹತ್ವದ ಶರಣೆಯರು ಬೆಳೆದು ನಿಂತರು.

ಭಾರತೀಯ ಸಂಸ್ಕೃತಿಯಲ್ಲಿ ಮಹಿಳೆಗೆ ನೀಡಿರುವ ಸ್ಥಾನಮಾನಗಳು ಕಾಲದಿಂದ ಕಾಲಕ್ಕೆ ಬದಲಾಗುತ್ತಲೇ ಬಂದಿವೆ. ವೇದಕಾಲದಿಂದ ಹಿಡಿದು ೧೨ನೇ ಶತಮಾನದ ವಚನಚಳುವಳಿಯ ಅವಧಿಯವರೆಗೆ ಮಹಿಳೆಯ ಬದುಕಿನಲ್ಲಿ ರೀತಿ–ನೀತಿಗಳಲ್ಲಿ ಅನೇಕ ಬದಲಾವಣೆಗಳನ್ನು ಕಾಣಬಹುದಾಗಿದೆ. ಅನೇಕ ಸಂದರ್ಭಗಳಲ್ಲಿ ಮಹಿಳೆ ಯಜಮಾನಸಂಸ್ಕೃತಿಯ ಪ್ರಭುತ್ವದಲ್ಲಿ ಸಿಕ್ಕು ಶೋಷಣೆಗೊಳಗಾಗಿದ್ದಾಳೆ. ಪಶು–ಪ್ರಾಣಿಗಳಿಗಿಂತಲೂ ಕೀಳಾಗಿ ಕಾಣಲ್ಪಟ್ಟಿದ್ದಾಳೆ. ಮಾತೃಪ್ರಧಾನ ಸಂಸ್ಕೃತಿಯಲ್ಲಿ ಮಾತೆಯೆಂದು ಗೌರವ ಹೊಂದಿದ್ದಾಳೆ. ಆದಿಶಕ್ತಿಯೆಂದು ವರ್ಣಿತಳಾಗಿದ್ದಾಳೆ. ದೇವತೆಯೆಂದು ಪೂಜಿಸಲ್ಪಟ್ಟಿದ್ದಾಳೆ. ಆದರೆ 'ನ ಸ್ತ್ರೀ ಸ್ವಾತಂತ್ರ್ಯಂ ಅರ್ಹತಿ'[1] ಎಂದು ಮನು ಸಾರುತ್ತಾನೆ. ಈ ಮಾತು ಸ್ಮೃತಿಯಲ್ಲಿ ಉಲ್ಲೇಖಿತ ಪಂಡಿತರ ವ್ಯಾಖ್ಯಾನವಾದರೆ; ಸಾಮಾನ್ಯರೆನಿಸಿಕೊಳ್ಳುವ ಪಾಮರರೂ ಹೊರತಾಗಿರಲಿಲ್ಲ. ಹಳ್ಳಿಗರ ಆಡು

ಮಾತೊಂದನ್ನು ಇಲ್ಲಿ ಗಮನಿಸಬೇಕು, "ಹೆಂಗಸಿನ ಬುದ್ಧಿ ಮೊಳಕಾಲು ಕೆಳಗೆ" ಇದು ಬರಿ ಮಾತಾಗಿರದೇ ಅಂದಿನ ಪುರುಷರ ಮನೋಸ್ಥಿತಿಯಾಗಿತ್ತು. ಆದರೆ ನಮ್ಮ ಕನ್ನಡ ಶರಣರು ಮಾಡಿದ ಬಹುಮುಖ್ಯ ಕಾಯಕವೆಂದರೆ ಈ ಮನೋಸ್ಥಿತಿಯನ್ನೇ ಪರಿವರ್ತಿಸಲು ಹೆಣಗಿದರು. ಇದರಲ್ಲಿ ಅಂದು ಭಾಗಶ: ಯಶಸ್ಸನ್ನೂ ಪಡೆದರು. ಇದೆಂಥ ವಿರೋದಾಭಾಸವೆನ್ನುವುದು ನಿಚ್ಚಳವಾಗುತ್ತದೆ.

**ಕನ್ನಡದಲ್ಲಿ ಸ್ತ್ರೀ ವಚನ ಚಳುವಳಿ**

೧೨ನೇ ಶತಮಾನದಲ್ಲಿ ಹಲವಾರು ವಚನಕಾರ್ತಿಯರು ಕನ್ನಡದಲ್ಲಿ ವಚನಗಳನ್ನು ರಚಿಸಿ, ಸಾಹಿತ್ಯದಲ್ಲಿ ಸಮಾಜದ ಬಗ್ಗೆ ಗಂಭೀರವಾಗಿ ಚಿಂತನೆ ನಡೆಸಿದ್ದರು. ಮುಂದೆ ದೇಶದ ಸ್ವಾತಂತ್ರ್ಯ ಚಳವಳಿಗಳು ನಡೆಯತೊಡಗಿ, ಸ್ವಾತಂತ್ರ್ಯಪೂರ್ವ ಸಂದರ್ಭದಲ್ಲಿ ಮಹಿಳೆಯರು ಶಿಕ್ಷಣದ ಮಹತ್ತ್ವದ ಬಗ್ಗೆ ಅರಿವು ಮೂಡಿತು. ಅದೇ ಮುಂದೆ ೨೦ನೇ ಶತಮಾನದ ಎಪ್ಪತ್ತು-ಎಂಬತ್ತರ ದಶಕದಲ್ಲಿ, ದಲಿತ-ಬಂಡಾಯ ಹಾಗೂ ಸ್ತ್ರೀಶೋಷಣೆಗೆ ಹೊಸ ಎಚ್ಚರ, ಹೊಸ ಅರಿವನ್ನು ಮೂಡಿಸಿತು.

ಈ ಸಂದರ್ಭಗಳಲ್ಲೆಲ್ಲ ಮಹಿಳೆಯರು ಸಮಾಜದ ಸಮಸ್ಯೆಗಳ ಬಗ್ಗೆ, ಅವುಗಳನ್ನು ತೊಡೆಯಲು ಆಗಬೇಕಾದ ಸುಧಾರಣೆಗಳ ಬಗ್ಗೆ ಗಂಭೀರ ಚಿಂತನೆ ನಡೆಸಿ ಸಾಹಿತ್ಯ ರಚಿಸಿದ್ದಾರೆ. ಇವೆಲ್ಲದರ ಜೊತೆ ಜೊತೆಗೇ ಪ್ರತ್ಯೇಕವಾಗಿ ಹರಿದು ವಿಶ್ವಕರ್ಮ ಜನಪದ ಸಾಹಿತ್ಯವನ್ನೂ ನಾವು ಮರೆಯುವಂತಿಲ್ಲ. ೧೨ನೆಯ ಶತಮಾನದಲ್ಲಿ ಶರಣರು ಧಾರ್ಮಿಕ ಬದಲಾವಣೆಯ ಮೂಲಕ ಸಮಾಜದ ಪರಿವರ್ತನೆಗೆ ಪ್ರಯತ್ನಿಸಿದರು. ಸಾಮಾಜಿಕ, ಸಾಹಿತ್ಯಕ ಆಂದೋಲನವನ್ನು ರೂಪಿಸಿದರು.

ಇಂದಿನ ಮಹಿಳಾವಾದಕ್ಕೆ, ದಲಿತವಾದಕ್ಕೆ ಸಮಾಜದಲ್ಲಿ ಸಮಾನತೆ ಬೇಕೆಂಬ ಆಲೋಚನೆ ಮತ್ತು ಬೇಡಿಕೆಗಳಿಗೆ, ಇತಿಹಾಸದಲ್ಲಿ ಈ ವಚನಕಾರ್ತಿಯರು ಮೊದಲ ಮೆಟ್ಟಿಲನ್ನು ಕಟ್ಟಿಕೊಟ್ಟಿದ್ದಾರೆ ಎಂದು ಹೇಳಬಹುದು. ಅಕ್ಕಮಹಾದೇವಿಯನ್ನು ಕನ್ನಡ ಸಾಹಿತ್ಯದ ಮೊದಲ ಬಂಡಾಯ ಕವಯತ್ರಿ ಎಂದು ನಾವು ಗುರುತಿಸಬಹುದು.

**ವಚನಗಳಲ್ಲಿ ಸ್ತ್ರೀ ಚಿತ್ರಣ**

ಮನುಷ್ಯ ಸಂಘಜೀವಿಯಾಗಿದ್ದಾನೆ. ಅದರಂತೆ ಪುರುಷ ಸ್ತ್ರೀಯನ್ನು; ಸ್ತ್ರೀಯು ಪುರುಷನನ್ನು ಅವಲಂಬಿಸಲೇಬೇಕು. ಗಂಡು ಹೇಗೆ ಸಮಾಜದ ಅತಿ ಮುಖ್ಯ ಘಟಕವೋ, ಹಾಗೆಯೇ ಹೆಣ್ಣು ಕೂಡ ಸಮಾಜದ ಅತೀ ಮುಖ್ಯ ಘಟಕ. ಅವರಿಬ್ಬರ ಸಂಬಂಧ ಕಾರ್ಯ ಕಾರಣ ಸಂಬಂಧದಂತೆ ಅನ್ಯೋನ್ಯವಾಗಿದೆ. ನಾಡಿನ ಸಾಂಸ್ಕೃತಿಕೋನ್ನತಿಗೆ ಗಂಡಿನಂತೆ ಹೆಣ್ಣು ಕೂಡ ಅತೀ ಮಹತ್ವದ ಪಾತ್ರವನ್ನಾಡಬಲ್ಲಳು. ಆದುದರಿಂದ ಪ್ರಜ್ಞಾವಂತ ಸಮಾಜದ ಸ್ತ್ರೀ-ಪುರುಷರಿಬ್ಬರೂ ಸರಿಯಾದ ದಿಶೆಯಲ್ಲಿ ವಿಚಾರಿಸಬೇಕಾದ ಸಮಯ ಈಗ ಬಂದಿದೆ. ಕಾಲ ಪಕ್ವವಾಗಿದೆ. ಪರಸ್ಪರರಿಬ್ಬರೂ ಆರೋಪ ಪ್ರತ್ಯಾರೋಪಗಳನ್ನು ಮಾಡುತ್ತ ಕೂಡುವ ಕಾಲವಿದಲ್ಲ. ಗಂಡಿನ ಅವನತಿಗೆ ಸ್ತ್ರೀಯೇ ಕಾರಣವೆಂದು ಪುರುಷವರ್ಗ, ಹೆಣ್ಣಿನ ಅವನತಿಗೆ ಗಂಡೇ ಕಾರಣವೆಂದು ಸ್ತ್ರೀವರ್ಗ. ಹೀಗೆ ಆರೋಪಗಳನ್ನು ಮಾಡದೇ ಕೊಡುಕೊಳ್ಳುವಿಕೆಯ, ಹೊಂದಾಣಿಕೆಯ ಮಾರ್ಗದಿಂದ ಇಬ್ಬರೂ ನಡೆದುಕೊಂಡು ಬಂದರೆ, ಇಬ್ಬರಿಗೂ ಸುಖ-ಶಾಂತಿ ಸಿಕ್ಕು ಜೀವನ ಪಾವನವಾಗುತ್ತದೆ. ಪರಸ್ಪರರ ಸಂಯಮ, ತಾಳ್ಮೆ ಅರಿತು ನಡೆಯುವ ಬುದ್ಧಿಯಿಂದ ಒಳ್ಳೆಯ ಸಮಾಜವನ್ನು ನಿರ್ಮಿಸಬಹುದಾಗಿದೆ. ಇಬ್ಬರೂ ತಮ್ಮಷ್ಟಕ್ಕೆ ತಾವೇ ಇರುವದು ಅಸ್ವಾಭಾವಿಕ ಮತ್ತು ನಿಸರ್ಗ ವಿರೋಧವೂ ಆಗುತ್ತದೆ.

ಅದಕ್ಕಾಗಿಯೇ ನಮ್ಮ ಅನುಭಾವಿಗಳು "ಹೆಣ್ಣಿಲ್ಲದವನ ಸಂಸಾರ ಮಳಲೊಳಗೆ ಎಣ್ಣೆ ಹೊಯ್ದಂತೆ" ಎಂದು ಹೆಣ್ಣಿನ ಅವಶ್ಯಕತೆಯನ್ನು ಮನದಟ್ಟು ಮಾಡಿದರೆ, "ಪುರುಷನಿಲ್ಲದವಳ ಬಾಳುವೆ ನೀರೊಳಕ್ಷರವ ಬರೆದಂತೆ" ಎಂದು ಗಂಡಿನ ಮಹತ್ವವನ್ನು ಹೇಳಿದ್ದಾರೆ. ಗಂಡು ಹೆಣ್ಣು ಸಮಾಜಕ್ಕೆ ತೀರ ಅವಶ್ಯಕವಾದ ಅತೀ ಮಹತ್ವದ ಘಟಕಗಳು, ಪರಸ್ಪರ ಆಕರ್ಷಣೆ ಮತ್ತು ಪ್ರೀತಿಗಳು ಪ್ರಕೃತಿ ದತ್ತ. ಇಬ್ಬರೂ ಕೈ-ಕೈ ಹಿಡಿದು ಹಿಡಿದು ನಡೆದಾಗ ಮಾತ್ರ ಅವರ ಜೀವನದಲ್ಲಿ ಬೆಳ್ಳಿಚುಕ್ಕೆ ಮೂಡುತ್ತದೆ. ಮುಂಜಾವಿನ ತಿಳಿಬೆಳಕು ಹೊಮ್ಮುತ್ತದೆ ಎಂದಿದ್ದಾರೆ.

ಇಷ್ಟಿದ್ದರೂ ಮಾನವ ಸಂಸ್ಕೃತಿಯ ಬೃಹತ್ ಇತಿಹಾಸದ ಪುಟಗಳನ್ನು ಕೂಲಂಕಷವಾಗಿ ಕಣ್ಣಿಟ್ಟು ನೋಡಿದರೆ, ಮನುಷ್ಯ ಮನುಷ್ಯನನ್ನು ಆಳಿದಂತೆ, ಈ ನೆಲದ ಮೇಲೆ ಗಂಡು ಹೆಣ್ಣನ್ನು ಅಬಲೆಯೆಂದೂ, ಕ್ಷುದ್ರಳೆಂದೂ, ಅಜ್ಞಾನಿಯೆಂದೂ ಅವಳಲ್ಲಿ ದೌರ್ಬಲ್ಯದ ಬೀಜವನ್ನು ಬಿತ್ತಿ, ಅವಳ ಬುದ್ಧಿ ಮತ್ತೆಯನ್ನೇ ಪ್ರಾಸವರಾಡಿ, ಅವಳು ತನ್ನ ಸೇವಕಿಯೆಂದೂ, ದಾಸಿಯೆಂದೆ ಭಾವಿಸಿ, ತೀರ ನಿಕೃಷ್ಟವಾದ ರೀತಿಯಲ್ಲಿ ಅವಳನ್ನು ನಡೆಯಿಸಿಕೊಂಡು ಬಂದಿದ್ದಾನೆ. ಸುದೀರ್ಘವಾದ ಮಾನವ ಪಳೆಯುಳಿಕೆಯಲ್ಲಿ ಹೆಚ್ಚಾಗಿ ಪುರುಷ ಪ್ರಭುತ್ವವಿರುವ ಸಮಾಜವೇ ಕಣ್ಣಿಗೆ ಬೀಳುತ್ತದೆ. ಅವನೇ ಪ್ರಧಾನ ಮುಖ್ಯಸ್ಥ, ಈ ಬೃಹತ್ ಸಮಾಜದ ಪ್ರಮುಖ ಪಾತ್ರವಹಿಸಿದರೂ, ಸುಭದ್ರ ವ್ಯವಸ್ಥೆಯಲ್ಲಿ ಸ್ತ್ರೀಯು ಪ್ರತಿಯೊಂದು ಘಟ್ಟದಲ್ಲಿ ಪುರುಷನೊಂದಿಗೆ ಭಾಗಿಯಾಗಿದ್ದರೂ ಇಂದಿಗೂ ತನ್ನ ತ್ಯಾಗ, ಸಹನೆ – ಪರಿಶ್ರಮಗಳನ್ನು ಹಂಚಿಕೊಂಡಿದ್ದರೂ, ಮಾನವ ಸಂಸ್ಕೃತಿಯ ಆಧಾರ ಅವಳಿಗೆ ನ್ಯಾಯವಾಗಿ ಸಿಗಲೇಬೇಕಾದ ಅವಶ್ಯಕತೆಯಿದೆ.

'ಸಾವ ಗಂಡರ ಒಲೆಯೊಳಗುಕ್ಕು...' ಎನ್ನುವ ಅಕ್ಕರ ಪ್ರತಿಭಟನೆಯ ಸ್ವರೂಪ ಆಧುನಿಕ ಸ್ತ್ರೀಯ ಬಂಡಾಯವನ್ನೇ ಹೇಳುತ್ತದೆ. ಪುರುಷದ್ವೇಶದ ಮಾತಾಗಿರದೆ ವ್ಯವಸ್ಥೆಯೊಂದರಲ್ಲಿ ಪುರುಷನ ಸ್ವಕೋಲಕಲ್ಪಿತ ಯಜಮಾನಿಕೆಯನ್ನು ಧಿಕ್ಕರಿಸುವ ನಾಗರಿಕ ಪ್ರಜ್ಞೆ, ವಚನಕಾರರ ಕಾಲಘಟ್ಟದಲ್ಲಿ ಬೀಜಾಂಕುರವಾದುದನ್ನು ಗಮನಿಸಬೇಕು.

ದೇವರ ದಾಸಿಮಯ್ಯ ಮತ್ತು ದುಗ್ಗಳೆಯರ ಮಾದರಿಯ ಬದುಕು ಇಡೀ ವೀರಶೈವ ಧರ್ಮಕ್ಕೆ ಆದರ್ಶ ತತ್ವವನ್ನು ನೀಡಿದೆ.

> "ಸತಿಪತಿಗಳೊಂದಾದ ಭಕ್ತಿ ಹಿತವೊಪ್ಪುದು ಶಿವಂಗೆ
> ಸತಿಪತಿಗಳೊಂದಾಗದವನ ಭಕ್ತಿ
> ಅಮೃತದೊಳು ವಿಷವ ಬೆರೆಸಿದಂತೆ ಕಾಣಾ ರಾಮನಾಥಾ"[2]

ಇದು ದಾಸ-ದುಗ್ಗಳೆಯವರ ಆದರ್ಶ ಬದುಕಿಗೆ ಹಿಡಿದ ಕನ್ನಡಿ, ಬರೆದ ಟೀಕೆಯಾಗಿದೆಯಷ್ಟೇ ಅಲ್ಲ; ಶಿವಶರಣರು ಸ್ತ್ರೀಯನ್ನು ಸಮಾನತೆಯಿಂದ ಗೌರವದಿಂದ ಕಂಡುದರ ಸ್ಪಷ್ಟ ಚಿತ್ರವೂ ಇದಾಗಿದೆ. ವೀರಶೈವರು ಸನ್ಯಾಸಕ್ಕಿಂತ ಸಂಸಾರಕ್ಕೆ; ವಾನಪ್ರಸ್ಥಕ್ಕಿಂತ ಗೃಹಸ್ಥ ಜೀವನಕ್ಕೆ ಹೆಚ್ಚು ಬೆಲೆಯನ್ನಿತ್ತು: ಲಿಂಗಾಂಗ ಸಾಮರಸ್ಯಕ್ಕೆ, ಶಿವಸಾಕ್ಷಾತ್ಕಾರಕ್ಕೆ ಸಂಸಾರ ಸಾಧನವಷ್ಟೇ ಅಲ್ಲಾ, ಸಿದ್ದಿಯೂ ಕೂಡ ಎಂದು ತಿಳಿದು ನಡೆದುದರ, ನಡೆದು ಪಡೆದುದರ ಶಿಲಾಶಾಸನದಂತಾಗಿದೆ.

> "ಹರಿದ ಹಾವಿಗಂಜೆ ! ಉರಿಯ ನಾಲಿತಗಂಜೆ !
> ಸುರಿಗೆಯ ಮೊನೆಗಂಜೆ ! ಒಂದಕ್ಕಂಜುವೆನ್ ಒಂದಕ್ಕಳ
> ಕುವೇ ಪರಸ್ತ್ರೀ-ಪರಧನವೆಂಬ ಈ ಜೂಬಿಂಗಂಜುವೇ?"[3]

ಪರಸ್ತ್ರೀ–ಪರಧನಗಳು ಪಾಪದ ಕೂಪಕ್ಕೆ ಇಕ್ಕುವ ವಸ್ತುಗಳೆಂದು ತಿಳಿದು ಅವುಗಳಿಂದ ದೂರವಿರುತ್ತಾನೆ. ಸ್ತ್ರೀ ಸಮಾನತೆ, ಸ್ತ್ರೀ ಗೌರವಕ್ಕಾಗಿ ತನ್ನ ಆಯುಷ್ಯವನ್ನೇ ಪಣಕ್ಕಿಟ್ಟು ಹೋರಾಡಿದ್ದಾನೆ ಬಸವಣ್ಣ, ಪರವಧುವಿನ ಬೇಟ, ಪರಸತಿಯರ ರತಿ ಸುಖಕ್ಕೆ ತನ್ನ ಮನವೆಳಸದಂತೆ ಬಹು ಎಚ್ಚರಿಕೆಯಿಂದ ಹೆಜ್ಜೆಯನ್ನಿಟ್ಟಿದ್ದಾನೆ. "ನೋಡಲಾಗದು ನುಡಿಸಲಾಗದು, ಪರಸ್ತ್ರೀಯ ಬೇಟ ಬೇಡ ಕಾಣಿರೋ" ಎಂದು ಸಂಗಡಿಗರನ್ನೂ ಎಚ್ಚರಿಸಿದ್ದಾನೆ.

"ತಾ ಮಾಡಿದ ಹೆಣ್ಣು ತನ್ನ ತಲೆಯನ್ನೇರಿತು
ತಾ ಮಾಡಿದ ಹೆಣ್ಣು ತನ್ನ ತೊಡೆಯನ್ನೇರಿ
ತಾ ಮಾಡಿದ ಹೆಣ್ಣು ನಾರಾಯಣನ ಎದೆಯನೇರಿತು
ಅದು ಕಾರಣ ಹೆಣ್ಣು ಹೆಣ್ಣಲ್ಲ, ಹೆಣ್ಣು ರಕ್ಕಸಿಯಲ್ಲ–
ಹೆಣ್ಣು ಪ್ರತ್ಯಕ್ಷ ಕಪಿಲಸಿದ್ಧ ಮಲ್ಲಿಕಾರ್ಜುನ".....(ಸಿದ್ಧರಾಮ)

ಎಂದು ಹೆಣ್ಣಿನ ಅವಸ್ಥೆಯನ್ನು ತಿಳಿಸಿ, ಹೆಣ್ಣುಬೇರೆಯಲ್ಲ ಮಲ್ಲಿಕಾರ್ಜುನ ಬೇರೆಯಲ್ಲವೆಂದಿದ್ದಾನೆ. ಅಂದರೆ ಶಿವ–ಶಕ್ತಿಗಳು ತೋರಿಕೆ ರೂಪ, ಅಂತರಂಗದಲ್ಲಿ ಒಂದೇ ಆಗಿದ್ದಾರೆಂದು ಅವರ ಅವಿನಾಭಾವ ಸಂಬಂಧವನ್ನು ಚಿತ್ರಿಸಿದ್ದಾನೆ. ಹೆಣ್ಣು ಗಂಡೆಂಬ ಭೇದ ಶಾರೀರಿಕವಾದುದು, ಆತ್ಮ ಗಂಡೂ ಅಲ್ಲ. ಹೆಣ್ಣೂ ಅಲ್ಲ. ಇವೆರಡನ್ನು ಮೀರಿದ ಜ್ಯೋತಿ ಯಾಗಿದೆ, ಸಿದ್ಧರಾಮ ಶಿವಯೋಗಿ ಹೆಣ್ಣಿನ ಬಗ್ಗೆ ಅತೀವ ಗೌರವವನ್ನು ಅಭಿಮಾನವನ್ನು ಮೆರೆದಿದ್ದಾನೆ. ಮಡಿವಾಳ ಮಾಚಿದೇವನೂ ಹೆಂಡತಿಯನ್ನು ಕೇವಲ ಸ್ತ್ರೀಯೆಂದು ತಿಳಿಯದೇ, ಅವಳು ಶಕ್ತಿಯ ಕೇಂದ್ರವೆಂದು ಬಗೆದಿದ್ದನು. ಅದರಿಂದಲೇ ಅವರ ದಾಂಪತ್ಯ ರಸಮಯವಾಗಿತ್ತು. ಶಿವಶರಣೆಯರಲ್ಲಿಯೇ ಅಗ್ರಗಣ್ಯಳಾದ ಮಹಾದೇವಿಯಕ್ಕನ ಬಗೆಗೆ ಉಳಿದ ಶರಣರ ಅಭಿಪ್ರಾಯಗಳನ್ನು ನೋಡಿದರೆ, ಮೆಚ್ಚುಗೆಯ ಮಾತುಗಳನ್ನು ಕೇಳಿದರೆ; ಬಹುಶಃ ಇಷ್ಟೊಂದು ಹೊಗಳಿಕೆಗೆ ಪಾತ್ರಳಾದವಳು ಹೆಣ್ಣಿನ ಇತಿಹಾಸದಲ್ಲಿಯೇ ಇಲ್ಲವೆಂದು ಹೇಳಬಹುದು.

ಶಿವಶರಣರು ಹೆಣ್ಣನ್ನು ಇಷ್ಟೊಂದು ಗೌರವದಿಂದ ಕಾಣಲಿಕ್ಕೆ ಅವರು ಅನುಸರಿಸಿದ 'ಶರಣಸತಿ ಲಿಂಗಪತಿ' ಎಂಬ ತತ್ವವೇ ಕಾರಣವಾಗಿದೆ. ಅದನ್ನು ಹೇಳಿಬಿಡಲಿಲ್ಲ. ಆಚರಿಸಿ ತೋರಿಸಿದರು. ಈ ತತ್ವ ಸ್ವೀಕರಿಸಿದವರಿಗೆ ಹೆಣ್ಣು–ಗಂಡು ಲಿಂಗಮಯವಾಗಿ ತೋರುತ್ತದೆ. ಚಿತ್ರ ಸ್ವರೂಪವಾಗಿ ನಿಲ್ಲುತ್ತದೆ. ವೀರಶೈವ ಧರ್ಮ ನೀಡಿದ ಅದ್ಭುತ ಕೊಡುಗೆಗಳಲ್ಲಿ ಇದೂ ಕೂಡ ಒಂದಾಗಿದೆ.

"ಉಭಯ ದೃಷ್ಟಿಯಿಂದ ದೃಷ್ಟವ ಕಂಡಂತೆ,
ದಂಪತಿ ಏಕಭಾವವಾಗಿ ನಿಂದಲ್ಲಿ ಗುಹೇಶ್ವರ
ಲಿಂಗಕ್ಕೆ ಅರ್ಪಿತವಾಯ್ತು"[4]

ಎಂದು ಅಲ್ಲಮಪ್ರಭು ಹೇಳಿದ್ದು–ಬಸವಣ್ಣನ ದಾಂಪತ್ಯವನ್ನು ನೋಡಿಯೇ ಆಗಿರಬೇಕು. ಲಕ್ಷದ ಮೇಲೆ ತೊಂಭತ್ತಾರು ಸಾವಿರ ಜನರಿಗೆ ನಿತ್ಯ ದಾಸೋಹ ಮಾಡಿಸುವ ಹೊಣೆ ಹೊತ್ತು, ಆ ನೇಮದಲ್ಲಿ ಸ್ವಲ್ಪವೂ ಚ್ಯುತಿ ಬರದಂತೆ ನಡೆದವಳು ನೀಲಾಂಬಿಕೆಯು, ಗಂಗಾಂಬಿಕೆಯೂ ಕೂಡ ಪತಿಯ ಪ್ರತಿಯೊಂದು ಕಾಯಕದಲ್ಲಿ ಸಮಪಾಲು ಪಡೆದಿದ್ದಳು. ಈ ಇಬ್ಬರೂ ಪತ್ನಿಯರು ಶಕ್ತಿಯ ಸಾಕ್ಷಾತ್ ರೂಪರೆನಿಸಿ ಬಸವಣ್ಣನ ಬಾಳಿನಲ್ಲಿ ತಿಳಿಬೆಳಕನ್ನು ದಯಪಾಲಿಸಿದರು.

ಲಕ್ಕಮ್ಮ–

"ಕೂಟಕ್ಕೆ ಸತಿಪತಿ ಎಂಬ ನಾಮವಲ್ಲದೆ;
ಅರಿವಿಂಗೆ ಬೇರೊಂದೊಡಲುಂಟೆ?

ಎಂದು ಆತ್ಮಜ್ಞಾನ ಪಡೆಯುವುದಕ್ಕೆ ಹೆಣ್ಣು – ಗಂಡು ಎಂಬ ಲಿಂಗ ಭೇದವೇ ಸಲ್ಲದೆಂದು ತಿಳಿಸಿದ್ದಾಳೆ.

"ಜನಿತಕ್ಕೆ ತಾಯಿಯಾಗಿ ಹೆತ್ತಳು ಮಾಯೆ
ಕೂಟಕ್ಕೆ ಸ್ತ್ರೀಯಾಗಿ ಕೂಡಿದಳು ಮಾಯೆ
ಮೋಹಕ್ಕೆ ಮಗಳಾಗಿ ಹುಟ್ಟಿದಳು ಮಾಯೆ"[5]

ತಾಯಿಯಾಗಿ, ಸ್ತ್ರೀಯಾಗಿ, ಮಗಳಾಗಿ, ಮಾಯೆ ಮೆರೆದಿದ್ದಾಳೆ. ಅದರಿಂದ ಲೌಕಿಕ ಸಂಬಂಧ ಕುದುರಿದೆ. ಶಿವಶರಣರಿಗೆ ಹೆಣ್ಣಾಗಲಿ, ಗಂಡಾಗಲಿ ಆದೊಂದು ಮಾಯಾ ಸಂಬಂಧವೆನಿಸಲಿಲ್ಲ. ಶಿವಶರಣೆಯರು ತಮ್ಮ ತಮ್ಮ ಪತಿಗಳಲ್ಲಿ ಭಕ್ತಿ–ಗೌರವವನ್ನು ಕೊಂಡಾಡಿದ್ದಾರೆ; ಹಿರಿತನದ ಬಗೆಗೂ ಆದರೆವನ್ನು ವ್ಯಕ್ತಮಾಡಿದ್ದಾರೆ. ಗಂಡಿನ ಜೊತೆಗೆ ಸಾಧನೆಯ, ಸಮರಸದ ಜೀವನ ಹೆಣ್ಣು, ಹೆಣ್ಣಿನ ಜೊತೆಗೆ ಗಂಡು ಕೂಡಿಕೊಂಡು ನಡೆಸುವುದೇ ಇಹದ ಜೀವನವೆಂದು ಅರಿತಿದ್ದಾರೆ. ಗಂಡನ ತಪ್ಪನ್ನು ಎತ್ತಿ ತೋರಿಸಿದ್ದಲ್ಲದೇ, ತಿದ್ದಿಕೊಳ್ಳುವಂತೆ ಸಲಹೆಯನ್ನು ಮಾಡಿದ್ದಾರೆ. 'ಈಸಕ್ಕಿಯಾಸೆ ನಿನಗೇಕೆ...? ಎನ್ನುವ ಮೂಲಕ ಪತಿಯ ಅರಿವನ್ನು ವಿಸ್ತರಿಸಿದ್ದಾಳೆ ಆಯ್ದಕ್ಕಿ ಲಕ್ಕಮ್ಮ.

ನೀಲಾಂಬಿಕೆಯು "ತಾನು ಹೆಣ್ಣುರೂಪ ಧರಿಸಿ ಆಡಲೂ ಇಲ್ಲ. ನುಡಿಯಲೂ ಇಲ್ಲ; ನಾನು ಇಹಪರದ ಹಂಗು ಹರಿದವಳು" ಎಂದು ತಾನು ಯಾವ ಅವಸ್ಥೆಯಲ್ಲಿದ್ದೇನೆಂಬುದನ್ನು ತಿಳಿಯಪಡಿಸಿದ್ದಾಳೆ. ತನಗೆ ಹೆಣ್ಣು ನಾಮವಲ್ಲವೆಂದು ಸಾರಿದ್ದಾಳೆ. ಯಾರಾದರೂ ಇವಳು ಹೆಣ್ಣು ಎಂದು ಹೀಗಳೆದರೆ, ಅವರಿಗೆ ನೀಲಾಂಬಿಕೆಯು ಕೊಡುವ ಉತ್ತರವಿದಾಗಿದೆ.

ಹೆಣ್ಣು ಮಾಯೆಯಂಬರು ಹೆಣ್ಣು ಮಾಯೆಯಲ್ಲ, ಗಂಡು ಮಾಯೆಯೆಂಬರು ಗಂಡು ಮಾಯೆಯಲ್ಲ, ಒಳಗೆ ಸುಳಿವ ಆತ್ಮ ಹೆಣ್ಣು ಅಲ್ಲ ಗಂಡು ಅಲ್ಲ... ಎನ್ನುವ ಅವರ ಧೋರಣೆ ದೈಹಿಕ ವ್ಯತ್ಯಾಸಗಳಿಂದ ಗಂಡು–ಹೆಣ್ಣು ಭೇದ ನಿಸರ್ಗದತ್ತ. ಆದರೆ ಅಂತರಾತ್ಮ, ಮನಸ್ಸು ಅಥವಾ ವಿವೇಕ ಎನ್ನುವುದು ಲಿಂಗಭೇದದಿಂದ ಅತೀತವಾದುದು ಎನ್ನುವುದು ಅವರು ಕಂಡುಕೊಂಡ ದೃಢ ನಿಲುವನ್ನು ಬಿಂಬಿಸುತ್ತದೆ. ಆ ಮೂಲಕ ವಿಶ್ವಮಾನವತಾವಾದವನ್ನು ಮೊಟ್ಟಮೊದಲು ಜಗತ್ತಿಗೆ ಸಾರಿದ ಸಾಮಾನ್ಯ ಜನರು ಐಕ್ಯಸ್ಥಲಕ್ಕೆ ತಲುಪಿದ ಅಸಾಮಾನ್ಯ ಶರಣರೆನಿಸಿದರು.

ಒಟ್ಟಿನಲ್ಲಿ ಶಿವಶರಣರ ವಿಶಾಲ ದೃಷ್ಟಿಕೋನದಿಂದಾಗಿ ಸ್ತ್ರೀಯರು ಸಮಾಜದ ಅನೇಕ ಬಂಧನಗಳಿಂದ ಮುಕ್ತಿ ಪಡೆದರು. ಇಂಥ ಅದ್ಭುತ ಕ್ರಾಂತಿಯಿಂದಾಗಿ ಜಗತ್ತೂ ಎಚ್ಚರವಾಯಿತು. ವೀರಶೈವ ಶರಣರು–ಶರಣೆಯರು ತುಳಿದ ದಾರಿಯನ್ನು ಮಾಡಿದ ಕ್ರಾಂತಿಯನ್ನು ಇಡೀ ಸಮಾಜವೇ ಸ್ವಾಗತಿಸಿತು. ನೆಲದ ಮಣ್ಣಿನ ಗುಣವೇ ಎನಿಸಿದ ಸ್ತ್ರೀ ದೌರ್ಬಲ್ಯಕ್ಕೆ ನೆಲದಾಳದ ಅದ್ಭುತ ಶಕ್ತಿ, ಕೊಡಲಿಪೆಟ್ಟು ಹಾಕಿ, ಅವರಲ್ಲಿ ಮನುಷ್ಯತ್ವದ ಬೀಜ ಬಿತ್ತಿದವರು ಶಿವಶರಣರು ಶಿವಶರಣರ ಈ ಬಗೆಯ ವಿಚಾರದಿಂದಾಗಿ ಸಾಹಿತ್ಯ ಲೋಕದಲ್ಲಿ ಸ್ತ್ರೀಗೆ ಅವಕಾಶ ದೊರೆಯಿತು. ಹರಿಹರ–ರಾಘವಾಂಕನಂಥ ಮಹಾಕವಿಗಳೂ ಹೆಣ್ಣಿನ ಅಭ್ಯುದಯಕ್ಕೆ ಹೋರಾಡಿದರು. ತಮ್ಮ ಕಾವ್ಯಗಳಲ್ಲಿ ದೌರ್ಬಲ್ಯದ ಸ್ತ್ರೀ ಪಾತ್ರಗಳಿಗೆ ಅವಕಾಶವನ್ನೇ ನೀಡದ್ದನ್ನು ಇಲ್ಲಿ ಗಮನಿಸಬಹುದು. ಇದೇ ಮಾರ್ಗವನ್ನು ಮುಂದಿನ ಕವಿಗಳೂ ತುಳಿದಿದ್ದಾರೆ. ಜನಪದದ ಮನೆಮನೆಗೂ ಎಚ್ಚರಿಕೆಯ ನಿನಾದ ಮೊಳಗಿತು. ಶಿವಶರಣರ ಸಮತಾವಾದ ಎಂಥ ಧರ್ಮಭೀರುಗಳನ್ನು ಬಾಯಿಕಟ್ಟಿಸು ವಂತಾಯಿತು. ಸ್ತ್ರೀಯರಿಗೆ ಮಾತು ಬರುವಂತಾಯಿತು.

**ಸಮಾರೋಪ**

ಬಸವಣ್ಣನವರು ಇಡೀ ಭಾರತದಲ್ಲಿ ಪ್ರಥಮ ಬಾರಿಗೆ ಸ್ತ್ರೀ ಸ್ವಾತಂತ್ರ್ಯವನ್ನು ಕಲ್ಪಿಸಿಕೊಟ್ಟರು ಎಂಬುದು ಹೆಮ್ಮೆ ಪಡಬೇಕಾದ ಸಂಗತಿ. ಮಹಿಳೆ ಪರಮಾತ್ಮನ ಸ್ವರೂಪಳು. ಅವಳು ನಮ್ಮ ಇಹ–ಪರದ ಬದುಕಿಗೆ ಸೋಪಾನ ವಾಗುವಳು. ಅವಳಿಂದ ನಮ್ಮ ಬದುಕು ಉದಾತ್ತಿಕರಣಗೊಳ್ಳುವುದೆಂದು ಸಾರಿದರು.

ಶಿವಶರಣರು ಸ್ತ್ರೀಯರನ್ನು ಎಲ್ಲ ಕ್ಷೇತ್ರಗಳಲ್ಲಿ, ಎಲ್ಲ ಹಂತಗಳಲ್ಲಿ ಮೇಲಕ್ಕೆತ್ತಿದ್ದರಿಂದಾಗಿಯೇ ಮತ್ತು ಸ್ತ್ರೀಯರು ತಮಗೆ ಸಿಕ್ಕ ಅವಕಾಶವನ್ನು ಸದುಪಯೋಗಪಡಿಸಿಕೊಂಡಿದ್ದರಿಂದಾಗಿಯೇ ಹನ್ನೆರಡನೆಯ ಶತಮಾನದಲ್ಲಿ ಶಿವಶರಣೆಯರ ಜಾಗೃತ ಬಳಗ ಕಣ್ಣಿಗೆ ಬೀಳುತ್ತದೆ. ಅದರಿಂದಾಗಿ ಸಂಪ್ರದಾಯವಾದಿಗಳೆಸಿಕೊಳ್ಳುವವರೂ, ಸನಾತನಿಗಳೂ ಕೂಡ ಸ್ತ್ರೀ ವ್ಯಕ್ತಿತ್ವದ ಬಗೆಗೆ ಮರುಪರಿಶೀಲನೆ ಮಾಡುವಂತಾಯಿತು. ಪರಮತೀಯ ಮಹಿಳೆಯರೂ ಜಾಗೃತರಾಗಿ, ಜಾಗೃತರಾಗಿ, ತಮ್ಮಲ್ಲಿಯ ದೌರ್ಬಲ್ಯವು ಮೂಲತಃ ನಮ್ಮಲ್ಲಿ ಇಲ್ಲವೇ ಇಲ್ಲ. ಅದು ಸಮಾಜದ ಒಂದು ಅಂಗವಾದ ಪುರುಷವರ್ಗದ ಹಿತಾಸಕ್ತಿಯ ತಂತ್ರವೆಂದು ಬಹಿರಂಗವಾಗಿವಾದಿಸಿ, ತಮ್ಮ ರಕ್ಷಣೆಯ ಹೊಣೆ ತಾವೇ ಹೊರುವಂತಾಯಿತು. ಕನ್ನಡ ನಾಡಿನ ಇತಿಹಾಸದಲ್ಲಿ, ಸಾಂಸ್ಕೃತಿಕ ಅಧ್ಯಯನದಲ್ಲಿ, ಸಾಹಿತ್ಯ ಚರಿತ್ರೆಯಲ್ಲಿ ಅನೇಕ ಉದಾಹರಣೆಗಳು ಸಿಗುತ್ತವೆ. ಶಿವಶರಣರ ಬಿರುಸಿನ ಪ್ರಚಾರ, ಬಿಚ್ಚು ಮನಸ್ಸಿನ ನುಡಿಗಳಿಂದಾಗಿ ಸ್ತ್ರೀ ಧರ್ಮದ ಕಳಕಳಿಯಿಂದಾಗಿ ಸಾಮಾನ್ಯವಾಗಿ ಮುಂದಿನ ಎಲ್ಲ ಸಮಾಜದವರೂ ಹೆಣ್ಣನ್ನು ಗೌರವಿಸಲು ಮುಂದಾಗಿದ್ದು ಶಿವಶರಣರು ಸಾಧಿಸಿದ ಮಹತ್ವದ ವಿಜಯವೆನಿಸಿದೆ.

**ಕೊನೆ ಟಿಪ್ಪಣಿಗಳು**

1. https://www.indica.today/bharatiya-languages/manusmriti-kannada-i-women/
2. ಶಿವಶರಣರ ದೃಷ್ಟಿಯಲ್ಲಿ ಸ್ತ್ರೀ, ಪ್ರೊ. ಎಸ್.ವಾಯ್.ಹಂಜಿ ಪುಟ : 20
3. ಅದೇ ಪುಟ : 29
4. ಅದೇ ಪುಟ : 34
5. ಅದೇ ಪುಟ : 35

**ಪರಾಮರ್ಶನ ಗ್ರಂಥಗಳು**


1. ಶಿವಶರಣರ ದೃಷ್ಟಿಯಲ್ಲಿ ಸ್ತ್ರೀ, ಪ್ರೊ. ಎಸ್.ವಾಯ್.ಹಂಜಿ, ಪ್ರಭು ಪ್ರಕಾಶನ, ಚಿಕ್ಕೋಡಿ.
2. ಸುಳಿಯೊಡೆದ ಬೆಳೆ, ಸಂ. ಬಿ.ಎಂ.ಶರಭೇಂದ್ರಯ್ಯ, ಬಸವಕೇಂದ್ರ, ಶ್ರೀ ಮುರುಘಾಮಠ, ಚಿತ್ರದುರ್ಗ.
3. ನಮ್ಮ ಸುತ್ತ, ಸಂ. ಬಿ.ಎಂ.ಶರಭೇಂದ್ರಯ್ಯ, ಬಸವಕೇಂದ್ರ, ಶ್ರೀ ಮುರುಘಾಮಠ, ಚಿತ್ರದುರ್ಗ.
4. ವಚನ ಸಾಹಿತ್ಯ, ಡಾ. ಎಂ.ಬಿ.ಹೂಗಾರ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.
5. ವಚನ ಸಾಹಿತ್ಯದಲ್ಲಿ ಸ್ತ್ರೀಯರ ಕ್ರಾಂತಿ, ಹೆಚ್.ಜಿ.ಶೋಭಾ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.
6. ವಚನ ಸಾಹಿತ್ಯದ ಹೊಸ ಪರಿಕಲ್ಪನೆ, ರಘುಶಂಬಾ ಬಾತಂಬ್ರ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.